## ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ

| | |
|---|---|
| ಸಿ.ಸಿ.ನಂ. | 285/2023 |
| ಸಿ.ಡಬ್ಲ್ಯೂ | 7 |
| ಪಿ.ಡಬ್ಲ್ಯೂ | 4 |

| | | |
|---|---|---|
| ಹೆಸರು | :- | ಲಕ್ಷ್ಮಣ ಉಪ್ಪಾರ |
| ತಂದೆ/ಗಂಡನ ಹೆಸರು | :- | ವಿಠ್ಠಲ |
| ವಯಸ್ಸು | :- | 35 ವರ್ಷ |
| ಉದ್ಯೋಗ | :- | ಅಬಕಾರಿ ಉಪ ನೀರಿಕ್ಷಕರು, ಬೆಳ್ತಂಗಡಿ |
| ವಾಸಸ್ಥಳ | :- | ಬೆಳ್ತಂಗಡಿ |

**ಸಾಕ್ಷಿಯನ್ನು ದಿಃ03.10.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**
**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

**1.**ದಿಃ19.03.2021 ರಿಂದ ದಿಃ20.12.2023 ಈವರೆಗೆ ನಾನು ಮುಧೋಳ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ13.01.2023 ಸದರಿ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಮುಂದಿನ ತನಿಖೆಗೆ ಪಡೆದುಕೊಂಡು ತನಿಖೆ ಮುಂದುವರೆದು ಅದೇ ದಿನ ಪ್ರತ್ಯೇಕ್ಷ ಸಾಕ್ಷಿದಾರರಾದ ಚಾಸಾ-4 ಮತ್ತು ಚಾಸಾ-5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ31.05.2023 ರಂದು ಜಪ್ತಾದ ಮುದ್ದೆ ಮಾಲಿನಿಂದ ರಾಸಾಯನಿಕ ಪರೀಕ್ಷೆಗಾಗಿ ಅಬಕಾರಿ ಸ್ವತ್ತನ್ನು ಎಫ್.ಎಸ್.ಎಲ್ ಧಾರವಾಡ ಚಾಸಾ-4 ರವರ ಮೂಲಕ ಕಳುಹಿಸಿ, ಅದೇ ದಿನ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ದಿಃ13.01.2023 ರಂದು ಪಿ.ಡಿ.ಓ ಬ ಭಂಟನೂರ ಅವರಿಗೆ ಅಪರಾಧ ಕೃತ್ಯ ಜರುಗಿದ ಮನೆಯ ಮಾಲೀಕತ್ವದ ಕುರಿತು ಮಾಹಿತಿ ಕೋರಿ ಬರೆದು ದಿಃ18.01.2023 ರಂದು ಸದರಿ ಮಾಹಿತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ20.02.2023 ರಂದು ಕೃತ್ಯ ಜರುಗಿದ ಮನೆಯ ಮಾಲೀಕರಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ದಿಃ25.03.2023 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು, ಜಾಮೀನಿನ ಆದೇಶದಂತೆ ಬಿಡುಗಡೆ ಮಾಡಿರುತ್ತೇನೆ. ದಿಃ25.03.2023 ರಂದು ಚಾಸಾ-4 ಮತ್ತು ಚಾಸಾ-5 ರವರ ಮರುಹೇಳಿಕೆ ಪಡೆದಿರುತ್ತೇನೆ. ದಿಃ09.06.2023 ರಂದು ಆರೋಪಿತನ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿದ್ದ ಕಾರಣ ದೋಷರೋಪಣಾ ಪಟ್ಟಿ ತಯಾರಿಸಿ ಸಲ್ಲಿಸಿರುತ್ತೇನೆ.

2. ಸಾಕ್ಷಿಗೆ ಈಗ ದಿಃ31.05.2023 ರಂದು ಎಫ್.ಎಸ್.ಎಲ್ ಧಾರವಾಡಕ್ಕೆ ಬರೆದ ಪತ್ರ ಮತ್ತು ಅದೇ ದಿನ ಸ್ವೀಕರಿಸಿದ ರಾಸಾಯನಿಕ ಪರೀಕ್ಷಾ ವರದಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು ನಿಪಿ-7 ಮತ್ತು ನಿಪಿ-8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಮತ್ತು ನಿಪಿ-8(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-4 ರವರು ನೀಡಿದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿ ನಿಪಿ-9(ಎ) ಎಂದು ಗುರುತಿಸಲಾಯಿತು. ಪಿ.ಡಿ.ಒ ಭಂಟನೂರ ಇವರಿಗೆ ದಿಃ13.01.2023 ರಂದು ಕಳುಹಿಸಿದ ಪತ್ರ ಮತ್ತು ದಿಃ18.01.2023 ರಂದು ಸ್ವೀಕರಿಸಿದ ಉತ್ತರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಸದರಿ ದಾಖಲಾತಿಗಳನ್ನು ಕ್ರಮವಾಗಿ ನಿಪಿ-10 ಮತ್ತು ನಿಪಿ-11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿಃ20.02.2023 ರಂದು ಮನೆಯ ಮಾಲೀಕರಾದ 2 ನೇ ಆರೋಪಿತನಿಗೆ ಕಳುಹಿಸಿದ ನೋಟಿಸ್ ಪ್ರತಿಯನ್ನು ಹಾಜರಪಡಿಸಿದ್ದು, ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಮುಮಾ-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ.

**ಪಾಟೀ ಸವಾಲು ಃ ಶ್ರೀ.ಎಸ್.ಎಫ್.ಬಿ ವಕೀಲರಿಂದ ಶ್ರೀ.ಟಿ.ಆರ್.ಎಚ್ ವಕೀಲರ ಪರ ಆರೋಪಿತರ ಪರವಾಗಿ**

1. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನೀವು ಯಾವುದೇ ಹೇಳಿಕೆ ಪಡೆದಿಲ್ಲ, ಯಾವುದೇ ಮುದ್ದೆ ಮಾಲನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಲ್ಲ, ವರದಿ ಸ್ವೀಕರಿಸಿಲ್ಲ, ಪಿ.ಡಿ.ಒ ಭಂಟನೂರ ಅವರಿಗೆ ಪತ್ರ ಬರೆದಿಲ್ಲ, ವರದಿ ಸ್ವೀಕರಿಸಿಲ್ಲ, ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದಿದ್ದರೂ ಸಹ ಚಾಸಾ-1 ರವರು ನಿಮ್ಮ ಸಹೋದ್ಯೋಗಿ ಆದ ಕಾರಣ ಅವರು ಸಲ್ಲಿಸಿದ ಸುಳ್ಳು ದೂರಿಗೆ ಪೂರಕವಾಗಿ, ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಮುಮಾ-1 ಮತ್ತು 2 ಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ